೮) ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಲಿರುವ ಸದಸ್ಯರು 6 ವರ್ಷಗಳವರೆಗೆ ಮುಂದುವರಿಯುವುದರಿಂದ ಪರಿಷತ್ತಿನ ಸಂಘಟನೆಗೆ ಧಕ್ಕೆಯುಂಟಾಗಿರುವುದು

ಶ್ರೀ ಜಿ. ರಾಜೂಗೌಡ.—ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯ ಪಡೆದ ಎಲ್ಲಾ ವರ್ಗದ ಸದಸ್ಯರಿಗೂ ಪ್ರತಿ ಎರಡೂ ವರ್ಷಕ್ಕೊಮ್ಮೆ ಮೂರನೆ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುವ ಕಟ್ಟುಪಾಡು ಇರುವಾಗ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಲಿರುವ ಇಪ್ಪತ್ತು ನಾಲ್ಕು ಮಂದಿ ಸದಸ್ಯರೆಲ್ಲರೂ ಆರು ವರ್ಷಗಳ ಕಾಲ ಮುಂದುವರಿಯುತ್ತಾರೆ. ಮತ್ತೆ ಇದೇ ವ್ಯವಸ್ಥೆ ಮುಂದುವರಿದರೆ ವಿಧಾನ ಪರಿಷತ್ತಿನ ಸಂಘಟನೆಯ ಸ್ವರೂಪವೇ ಅಳಿಸಿ ಹೋಗಿ ಸಾರ್ವತ್ರಿಕ ಚುನಾವಣೆಯ ಲಕ್ಷಣ ಬರುತ್ತದೆ. ಆಯ್ಕೆ ಹೊಂದಿದ ಸದಸ್ಯರ ಅವಧಿಯನ್ನಾಗಲಿ, ಸೇವಾವಧಿಯನ್ನಾಗಲಿ, ಮೊಟಕುಗೊಳಿಸುವ ಅಧಿಕಾರ ಯಾರಿಗೂ ಇಲ್ಲ. ಪರಿಸ್ಥಿತಿ ಹೀಗಿರುವಾಗ ಈ ಕ್ಲಿಷ್ಟ ಸಮಸ್ಯೆಯನ್ನು ಯಾವ ರೀತಿಯಲ್ಲಿ ಎದುರಿಸುತ್ತಾರೆಂದು ಮಾನ್ಯ ಕಾನೂನು ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಖಾತೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಇದು ರಾಜ್ಯಸರಕಾರದ ಕಾನೂನು ವ್ಯಾಪ್ತಿಯಲ್ಲಿ ಬರತಕ್ಕಂಥ ವಿಷಯ ಅಲ್ಲದಿದ್ದುದರಿಂದ ಈ ವಿಷಯದಲ್ಲಿ ಉತ್ತರ ಕೊಡತಕ್ಕಂಥ ಅವಶ್ಯಕತೆ ಇರುವುದಿಲ್ಲ

೯) ಮಲಪ್ರಭ ಬಲದಂಡೆ ಕಾಲುವೆಗೆ ಕರೂಡಿಹಳ್ಳಕ್ಕೆ ಅಕ್ವೆಡಕ್ಟ್ ಕಟ್ಟುವ ಮೂಲಕ ರೈತರಿಗೆ ಅನುಕೂಲ ಮಾಡುವುದು

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಲಪ್ರಭಾ ಬಲದಂಡೆ ಕಾಲುವೆಯನ್ನು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಕರೂಡಿಹಳ್ಳಿ ಸಮೀಪದ ಹಡಗಲಿಯಿಂದ ಬಸರಕೋಡ್‌ವರೆಗೆ ತೋಡಿಸಿದ್ದು, ಆ ಗ್ರಾಮಗಳ ರೈತರ ಜಮೀನಿಗೆ ನೀರು ಒದಗಿಸಲಾಗುತ್ತಿದೆ. ರೋಣ ತಾಲ್ಲೂಕಿನ ಹಡಗಲಿ ಗ್ರಾಮದಿಂದ ಇತರೆ ಗ್ರಾಮಗಳಾದ ಬಸರಕೋಡ್, ಸೈನಾಪುರ, ಬೆಳೇರಿ ಕೆರೆಹಾಳ್, ಮಾದಲಗೇರಿ ಹಾಗೂ ಬಾದಾಮಿ ತಾಲ್ಲೂಕಿನ ಧನಕಸಿರೂರ್ ಮತ್ತು ಮಾಸೇರಿ ಗ್ರಾಮಗಳ ರೈತರ ಜಮೀನಿಗೆ ನೀರು ಒದಗಿಸಬೇಕಾದರೆ ಹಡಗಲಿ ಮತ್ತು ಬಸರ ಕೋಡ್ ನಡುವೆ ಕರೂಡಿಹಳ್ಳಿ ಎಂಬ ಹಳ್ಳವಿದ್ದು, ಆ ಹಳ್ಳಕ್ಕೆ ಅಕ್ವೆಡಕ್ಟ್ ಅನ್ನು ಕಟ್ಟುವ ಮುಖಾಂತರ ಕಾಲುವೆಯನ್ನು ಮುಂದುವರೆಸಬೇಕಾಗುತ್ತದೆ. ಈ ಬಗ್ಗೆ ಮೇಲ್ಕಂಡ ಗ್ರಾಮಗಳ ಗ್ರಾಮಸ್ಥರು ಸಂಬಂಧಪಟ್ಟ ನೀರಾವರಿ ಮಂತ್ರಿಗಳಿಗೂ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೂ ಅರ್ಜಿಯನ್ನು ಸಲ್ಲಿಸಿದ್ದು, ನಕ್ಷೆ ಮತ್ತು ಅಂದಾಜನ್ನು ತಯಾರಿಸಲಾಗಿದೆಯೆಂದು ತಿಳಿದುಬಂದಿದೆ. ವಿಧಾನ ಪರಿಷತ್ತಿನಲ್ಲಿ ಮಾಜಿ ನೀರಾವರಿ ಮಂತ್ರಿಗಳಾದ ಶ್ರೀ ದೇವೇಗೌಡರವರು ಸದರಿ ಅಕ್ವೆಡೆಟ್ಟ್ ಕಾಮಗಾರಿಯನ್ನು ೮೭-೮೮ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ಒದಗಿಸುವ ಮೂಲಕ ಕೆಲಸ ಕೈಗೊಳ್ಳುವುದಾಗಿ ಹೇಳಿದ್ದರು ಆದರೆ ಈವರೆಗೂ ಆ ಅಕ್ವೆಡಕ್ಟ್‌ನ ಕಾಮಗಾರಿಯನ್ನು ಪ್ರಾರಂಭಿಸಿಲ್ಲ. ತಮಗೆ ತಿಳಿದ ಹಾಗೆ ಮೇಲ್ಕಂಡ ರೋಣ ಹಾಗೂ ಬಾದಾಮಿ ತಾಲ್ಲೂಕಿನ ಗ್ರಾಮಗಳು ಆಗಾಗ ಬರಗಾಲಕ್ಕೆ ತುತ್ತಾಗುತ್ತಿದ್ದು, ರೈತರ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿದೆ. ಕಾರಣ ಸದರಿ ಮಲಪ್ರಭಾ ಬಲದಂಡೆ ಕಾಲುವೆಗೆ ಕರೂಡಿಹಳ್ಳಕ್ಕೆ ಅಡ್ಡಲಾಗಿ ಅಕ್ವೆಡೆಕ್ಟ್ ಅನ್ನು ಕಟ್ಟುವ ಮೂಲಕ ಮೇಲ್ಕಂಡ ಗ್ರಾಮಗಳ ರೈತರ ಜಮೀನಿಗೆ ನೀರು ಒದಗಿಸುವ ವ್ಯವಸ್ಥೆ ಮಾಡುವುದು. ಈ ಕಾಮಗಾರಿ ಈಗ ಯಾವ ಹಂತದಲ್ಲಿದೆ ? ನಕ್ಷೆ ಹಾಗೂ ಅಂದಾಜು ತಯಾರಾಗಿದೆಯೇ ? ಅಗತ್ಯವಾದ ಹಣವನ್ನು ಪೂರೈಸಲಾಗಿದೆಯೇ ? ಮತ್ತು ಯಾವಾಗ ಈ ಕಾಮಗಾರಿಯನ್ನು ಮುಗಿಸಲಾಗುವುದೆಂಬ ಬಗ್ಗೆ ತಿಳಿಸುವಂತೆ ಕೋರುವೆ ಅಲ್ಲದೆ ಮಲಪ್ರಭಾ ಎಡದಂಡೆಯ ಕಾಲುವೆಯ ಕೆಲಸವನ್ನು ತ್ವರಿತಗೊಳಿಸುವುದಲ್ಲದೇ ಮಲಪ್ರಭಾ ಮೇಲಕ್ಕೆ ಮಹದಾಯಿ ನದಿ ನೀರು ತಿರುಗಿಸುವುದರಿಂದ ಆಣೆಕಟ್ಟಿನಲ್ಲಿ ನೀರು ಸಂಗ್ರಹವಾಗುವ ಕೆಲಸ ಎಲ್ಲಿಗೆ ಬಂದಿದೆ ?

ಶ್ರೀ ಎ. ಲಕ್ಷ್ಮೀಸಾಗರ್.— ಈಗ ಉತ್ತರ ಇಲ್ಲ ಉತ್ತರವನ್ನು ತರಿಸಿ ಕೊಡುತ್ತೇನೆ.